3) ಬಾಕಿದಾರರ ಬ್ಯಾಂಕ್ ಖಾತೆಗಳನ್ನು ಸ್ಥಗಿತಗೊಳಿಸುವ, ಮತ್ತು

4) ಬಾಕಿದಾರರುಗಳ ಸಾಲಗಾರರಿಂದ ಅವರಿಗೆ ಬರಬೇಕಾಗಿರುವ ಹಣವನ್ನು ಬಾಕಿ ತೆರಿಗೆಗೆ ಜಮೆಮಾಡಿಕೊಳ್ಳುವುದು, ಕರ್ನಾಟಕ ಮಾರಾಟ ತೆರಿಗೆ ಕಾಯ್ದೆ 1957ರ ಕಲಂ 13ರಲ್ಲಿ ಬಾಕಿಯನ್ನು ವಸೂಲುಮಾಡಲು ವಿವರಿಸಿರುವ ಹಲವಾರು ಮಾರ್ಗಗಳಿದ್ದು ಬಾಕಿ ವಸೂಲಿಗಾಗಿ ಕಟ್ಟುನಿಟ್ಟಾಗಿ ಅವಲಂಬಿಸಲಾಗುತ್ತಿದೆ. ಈ ಕ್ರಮಗಳ ಜೊತೆಗೆ, ತೆರಿಗೆ ವಸೂಲಿ ಅಧಿಕಾರಿಗಳು ಒಂದು ವಿಶೇಷ ಆಂದೋಲನವನ್ನು ಸಹ ಉಡಾಯಿಸಿ ಹಳೇ ಬಾಕಿ ಮೊತ್ತವನ್ನು ವಸೂಲಿ ಮಾಡುತ್ತಾರೆ.

ನ್ಯಾಯಾಲಯಗಳಲ್ಲಿ ಇತ್ಯರ್ಥವಾಗದೆ ಉಳಿದಿರುವ ಮೊಕದ್ದಮೆಗಳು

955 (373) ಶ್ರೀ ಜಿ. ರಾಜೂಗೌಡ :- ಮಾನ್ಯ ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವೇ?

ಅ) ರಾಜ್ಯದಲ್ಲಿ ಮುಖ್ಯನ್ಯಾಯಾಲಯದಲ್ಲಿ ಎಷ್ಟು ಮೊಕದ್ದಮೆಗಳು ಇತ್ಯರ್ಥವಾಗದೆ ಉಳಿದಿವೆ?

ಆ) ಇದರಲ್ಲಿ ಸಿವಿಲ್ ಮತ್ತು ಕ್ರಿಮಿನಲ್ ಮೊಕದ್ದಮೆಗಳ ಸಂಖ್ಯೆ ಎಷ್ಟು?

ಇ) 05 ವರ್ಷದ ಮೇಲ್ಪಟ್ಟು 10 ವರ್ಷದ ಒಳಪಟ್ಟಿರುವ ಸಿವಿಲ್ ಮತ್ತು ಕ್ರಿಮಿನಲ್ ಮೊಕದ್ದಮೆಗಳ ಸಂಖ್ಯೆ ಎಷ್ಟು?

ಈ) ಸಕಾಲದಲ್ಲಿ ಇತ್ಯರ್ಥ ಮಾಡಲು ಸರ್ಕಾರ ಕೈಗೊಳ್ಳಬೇಕಾಗಿರುವ ಕ್ರಮಗಳೇನು?

ಶ್ರೀ ಹಾರನಹಳ್ಳಿ ರಾಮಸ್ವಾಮಿ (ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವರು) :-

ಅ) 31-12-1992ರಲ್ಲಿದ್ದಂತೆ 1,15,164 ಮೊಕದ್ದಮೆಗಳು (ಸಿವಿಲ್ ಮತ್ತು ಕ್ರಿಮಿನಲ್) ಉಚ್ಚ ನ್ಯಾಯಾಲಯದಲ್ಲಿ ಬಾಕಿ ಇವೆ.

ಆ) 31-12-1992ರಲ್ಲಿದ್ದಂತೆ 1,12,637 ಸಿವಿಲ್ ಮೊಕದ್ದಮೆಗಳು ಮತ್ತು 2,527 ಕ್ರಿಮಿನಲ್ ಮೊಕದ್ದಮೆಗಳು ಬಾಕಿ ಇವೆ.

ಇ) 31-12-1992ರಲ್ಲಿದ್ದಂತೆ 5 ವರ್ಷಕ್ಕೆ ಮೇಲ್ಪಟ್ಟು 10 ವರ್ಷದ ಒಳಗೆ ಬಾಕಿ ಇರುವ ಸಿವಿಲ್ ಮೊಕದ್ದಮೆಗಳು 11, 874 ಮತ್ತು ಕ್ರಿಮಿನಲ್ ಮೊಕದ್ದಮೆಗಳು 14 ಆಗಿವೆ.

ಈ) ನ್ಯಾಯಾಲಯಗಳಲ್ಲಿ ಖಾಲಿ ಇರುವ ಹುದ್ದೆಗಳನ್ನು ಭರ್ತಿ ಮಾಡಲು ಸೂಕ್ತ ಕ್ರಮ ಕೈಗೊಳ್ಳಲಾಗುತ್ತಿದೆ. ಹಾಗೂ ನ್ಯಾಯಾಧೀಶರಿಗೆ ಮೊಕದ್ದಮೆಗಳನ್ನು ಶೀಘ್ರವಾಗಿ ಇತ್ಯರ್ಥ ಮಾಡಲು ಅವಶ್ಯವಿರುವ ಸಂಪನ್ಮೂಲಗಳನ್ನು ನೀಡುವ ಬಗ್ಗೆಯೂ ಪರಿಶೀಲಿಸಲಾಗುತ್ತಿದೆ.

ರಾಜ್ಯದಲ್ಲಿನ ವಿಚಾರಣಾಧೀನ ಬಂಧಿಗಳ ಸಂಖ್ಯೆ ಕುರಿತು.

956 (1164) ಶ್ರೀ ಎ.ಕೆ.ಅನಂತಕೃಷ್ಣ (ಶಿವಾಜಿನಗರ) :- ಮಾನ್ಯ ಗೃಹ ರಾಜ್ಯ ಮಂತ್ರಿಗಳು